ಅಗಾಇಗಾ ಅನ್ನೋದರೊಳಗೆ ಕಾಟ್ಮಾರಯ್ಯನ ಹೊಲತೋಟಗಳಿದ್ದೆಡೆಯಲ್ಲಿ ಆರಾಳೆತ್ತರದ ಕಾಲುವೆಯಾಗಿತ್ತು. ತಮ್ಮನ್ನು ಪೊರೆದಿದ್ದ ತೆಂಗಿನ ಮರಗಳು ಕಾಲುವೆಯ ಇಕ್ಕೆಲದಲ್ಲೂ ಗುಡ್ಡದಂತೆ ಬಿದ್ದಿದ್ದ ಮಣ್ಣಿನ ಮೇಲೆ ಅಸುನೀಗಿದ್ದು, ಕಾಟ್ಮಾರಯ್ಯನ ಎದೆಗೇ ಇರಿದಂತಾಗಿತ್ತು. ಸಂತೈಕೆಗೆ ನಿಲುಕದ ದೊಡ್ಡ ಸಂಕಟಕ್ಕೊಳಗಾಗಿದ್ದ ಕಾಟ್ಮಾರಯ್ಯ ಮಾತು ಕಳಕಂಡು ಮೂಲೆ ಹಿಡಿದುಬಿಟ್ಟಿದ್ದ. ಇದು ಆಗಷ್ಟೇ ಪಿ.ಯು.ಸಿ. ಮುಗಿಸಿದ್ದ ಚಿಕ್ಬಸವನನ್ನು ಕಂಗಾಲಾಗಿಸಿತ್ತು. ಇನ್ನು ಇಲ್ಲೇ ಇದ್ದರೆ ಅಪ್ಪ ಮತ್ತೆ ಎದ್ದುಕೊಳ್ಳೋದು ದುಸ್ತರವೆಂಬ ಭಯದಿಂದ, ಸಾಲದ್ದಕ್ಕೆ ಅಲ್ಲೇ ಉಳಿಯಲು ಯಾವ ಕಾರಣವೂ ಇಲ್ಲದ್ದರಿಂದ, ಈಗಾಗಲೇ ಪಟ್ಟಣದ ಮೆಟ್ಟಿಲು ಹತ್ತಿದ್ದ ತನ್ನ ವಾರಿಗೆಯವರಂತೆ ಚಿಕ್ಬಸವನೂ ಇದ್ದೊಂದು ಮನೆಗೆ ಬೀಗವಿಕ್ಕಿ ಊರು ಬಿಟ್ಟಿದ್ದ.

★★★

ಮನೆ ಬಿಟ್ಟಾಗ ಇದ್ದ ಚಿಕ್ಬಸವನ ಹುಮ್ಮಸ್ಸು ಕಾಲುವೆ ಕಾಣತೊಡಗುತ್ತಲೇ ಕಡಿಮೆಯಾಗಿ ಎದುರಿಗೆ ಇಕ್ಕೆಲದಲ್ಲಿದ್ದ ಮಣ್ಣಿನ ಗುಡ್ಡೆಗಳು ಎದೆಗಾಕಿ ನೂಕಿದಂಗಾಗಲು, ಅತ್ತ ಹೋಗಲಾಗದೆ ಮತ್ತೊಂದು ದಾರಿಯಿಡಿದು, ಚಿಕ್ಕೆರೆ ಹಳ್ಳಕ್ಕೆ ಕಟ್ಟಿದ್ದ ಪುರಾತನ ಸೇತುವೆಯನ್ನು ತಟಾಯ್ದು ಮಲ್ಟಿಯೊಂದನ್ನು ಹತ್ತಿದ. ಎಳೆ ಬಿಸಿಲು ಅಲ್ಲಿನ ಎಲ್ಲದರ ಮೇಲೂ ಹೊನ್ನಿನ ನೀರೆರೆಚಿತ್ತು. ಎದುರಿಗೆ ಕಾಣುತ್ತಿದ್ದ ಕೆರೆ, ಅದರಾಚೆಗಿನ ಪುಟ್ಟ ಕಾಡು, ದನ ಕುರಿಗಳನ್ನು ಮೇಸಲು ಬರುತ್ತಿದ್ದ ಆ ದಿನಗಳು, ಆಗ ಆಡುತ್ತಿದ್ದ ಆಟಗಳು, ಕಿವಿ ತುಂಬಿಕೊಳ್ಳುತ್ತಿದ್ದ ದನಿಗಳು... ನೆನಪಾದಂತೆಲ್ಲಾ ಸಂಕಟಕ್ಕೊಳಗಾಗಿ ಕಣ್ಮುಚ್ಚಿದ. ಊರೆಡೆಯಿಂದ ನಗಾರಿ, ಕರಡೇವು, ವಾಲಗಗಳ ಸದ್ದು ತೇಲಿ ಬರುತ್ತಿತ್ತು. ಇದ್ದಕ್ಕಿದ್ದಂತೆ ತನ್ನ ಮುಖಕ್ಕೇ ರಾಚುವಂತೆ ಪುರ್ರನೆ ಹಾರಿದ ಹಕ್ಕಿಯೊಂದರ ಸದ್ದಿಗೆ ಕಣ್ಬಿಟ್ಟ. ಎತ್ತರೆತ್ತರಕ್ಕೆ ಹಾರುತ್ತಿದ್ದ ಆ ಹಕ್ಕಿ ಮತ್ತೆ ಮುಖ ಕೆಳಮಾಡಿಕೊಂಡು, ರೆಕ್ಕೆಗಳ ಬಡಿತವನ್ನು ನಿಲ್ಲಿಸಿಕೊಂಡು, ಕೆಳಗಿಳಿಯುತ್ತಾ ಬಂದು ಇನ್ನೇನು ನೆಲಕ್ಕೆ ತಾಗಿಬಿಡುತ್ತೇನೆ ಅನ್ನುವಷ್ಟರಲ್ಲಿ ಪುಸುಕ್ಕನೆ ಪಲ್ಟಿ ಹೊಡೆದು, ಮತ್ತೆ ರೆಕ್ಕೆ ಬಡಿಯುತ್ತಾ ಮೇಲಕ್ಕೆ ಮೇಲ್ಮೇಲಕ್ಕೆ ತೇಲುತ್ತಾ ಹೋಗಿ, ತಿರುತಿರುಗಿ ಕೆಳಕ್ಕಿಳಿಯೋ ಆಟವಾಡುತ್ತಿತ್ತು. ಸುಮಾರು ಹೊತ್ತು ಅದನ್ನೇ ದಿಟ್ಟಿಸುತ್ತಿದ್ದ ಚಿಕ್ಬಸವನೊಳಗಾಡಿದ ಅವ್ಯಕ್ತ ಖುಷಿಗೆ ಹೊತ್ತು ಹೋಗಿದ್ದೇ ಗೊತ್ತಾಗಲಿಲ್ಲ. ಊರು ತಲುಪಿದಾಗ ಸಂಜೆಯ ಸಿಡಿಗಾಗಿ ವತಾರೆಗೇ ಹೊರಟಿದ್ದ ದೇವರು ಊರಾಡುತ್ತಿತ್ತು.

## 4

ಎಷ್ಟು ಕೇಳಿಕೊಂಡರೂ ದೇವರ ಅಪ್ಪಣೆಯಾಗಲಿಲ್ಲ, ಅನ್ನುವ ಸುಳ್ಳಿನೊಂದಿಗೆ ಮಳ್ಳಜ್ಜನ ಮಾತುಗಳನ್ನೆಲ್ಲಾ ಅವ್ವನಿಗೆ ಹಂಗಂಗೇ ಹೇಳಿದ್ದ ಚಿಕ್ಬಸವ. ಇದರಿಂದ ಗಲಿಬಿಲಿಗೊಳಗಾದ ಸಣ್ಮಾದಮ್ಮ ಇದು ಆಸ್ಪತ್ರೇಲಿ ಹುಷಾರಾಗೋದಲ್ಲ ಅನ್ನುವ ಗೊಂದಲಕ್ಕೊಳಗಾಗಿ, ತನ್ನ ಮಾತಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲವೆಂದು ಗೊತ್ತಿದ್ದಾಗ್ಯೂ ಮಗನನ್ನು ಬಗೆಬಗೆಯಲ್ಲಿ ಒಪ್ಪಿಸಲು ನೋಡಿದಳು. ಒಪ್ಪದಿದ್ದಾಗ, 'ನೀನೇ ಕೈಯ್ಯಾರೆ ಸಾಯಾಕಬೇಕು ಅಂತಿದೀಯಾ ನಿಮ್ಮಪ್ಪನ್ನ' ಅಂತ ಅತ್ತೂ ಕರೆದು ನೋಡಿದಳು. ಜಗ್ಗದಿದ್ದಾಗ, 'ಅದ್ರ ಅಣೇಲಿ ಬರ್‍ದಂಗಾಗ್ಲಿ' ಅನ್ನುವ ಕೊರಗಿಗೆ ಬಿದ್ದಂಥ ಹೊತ್ತಲೇ, ಕಾಟ್ಮಾರಯ್ಯ ದಿನಕಳೆದಂತೆ ಒಳಮುಖಿಯಾಗುತ್ತಾ, ನಿರ್ಭಾವುಕ ನೋಟ ನೆಟ್ಟು ಕೂತುಬಿಡುತ್ತಿದ್ದದ್ದು ಸಣ್ಮಾದಮ್ಮನ ಕೊರಗನ್ನು ದೀಡಾಗಿಸುತ್ತಿತ್ತು.

ಹಿಂಗೇ ಬಿಟ್ಟರೆ ಪರಿಸ್ಥಿತಿ ಬಗೆಡುವುದು ಗ್ಯಾರಂಟಿ ಅನಿಸುತ್ತಲೇ ಚಿಕ್ಬಸವ ಅವ್ವನ ರಂಪಾಟವನ್ನು ಒತ್ತಟ್ಟಿಗಿಟ್ಟು ಅಪ್ಪನನ್ನು ಆಸ್ಪತ್ರೆಗೆ ತೋರಿಸಿದ. ಅಲ್ಲಿ ಇದೊಂದು ಮನೋರೋಗವಾದ್ದರಿಂದ ಸಂಬಂಧಪಟ್ಟವರಿಗೇ ತೋರಿಸಬೇಕೆಂಬ ಸಲಹೆಯಿತ್ತರು. ಇದು ಗೊತ್ತಾಗುತ್ತಲೇ ಸಣ್ಮಾದಮ್ಮ, 'ಅಯ್ಯೋ ಹುಚ್ಚಾಸ್ಪತ್ರೆಗೆ ಕರ್‍ಕಂಡೋಗಾಕೆ ನನ್ ಗಂಡ್ಗೇನು ತಲೆ ಕೆಟ್ಟೈತೇನಪ್ಪಾ' ಅಂತ